# ಕರ್ನಾಟಕ ಮುಕ್ತ ಶಾಲೆ–Karnataka Open School

ಶಾಲೆ ಬಿಟ್ಟ ಮಕ್ಕಳಿಗೆ ಹಾಗೂ ನಾನಾ ಕಾರಣಗಳಿಂದ ಶಾಲೆಯಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಗದೇ ಇರುವ ಮಕ್ಕಳಿಗೆ ವಿಶೇಷವಾಗಿ ಹೆಣ್ಣು ಮಕ್ಕಳು, ಮಹಿಳೆಯರು ಗ್ರಾಮೀಣ ಯುವಕರು, ಉದ್ಯೋಗಸ್ಥ ವ್ಯಕ್ತಿಗಳು ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದವರು ಪ್ರೌಢ ಶಿಕ್ಷಣ ಪದವಿ ಪೂರ್ವ ಶಿಕ್ಷಣ ಹಾಗೂ ಉನ್ನತ ಶಿಕ್ಷಣ ಪಡೆಯಲು ಅನುವುಮಾಡಿಕೊಡುವ ಸಲುವಾಗಿ ಹಾಗೂ ಅವರುಗಳನ್ನು ಶಿಕ್ಷಣದ ಪ್ರಮುಖ ವಾಹಿನಿಯಲ್ಲಿ ತೊಡಗಿಸಲು ನ್ಯಾಷನಲ್ ಇನ್ಸ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ ಎಂಬ ವ್ಯವಸ್ಥೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ ಹಾಗೂ ಅದೇ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಮುಕ್ತ ವಿದ್ಯಾಲಯ ಎಂಬ ಪ್ರೌಢ ಮಟ್ಟದ ಮುಕ್ತ ಶಾಲಾ ಶಿಕ್ಷಣವನ್ನು ನಿರ್ವಹಿಸಲು ಶ್ರೀ.ಶಿವರಾತ್ರೇಶ್ವರ ಮಹಾವಿದ್ಯಾಪೀಠ ಮೈಸೂರು, ಇವರಿಗೆ ಕರ್ನಾಟಕ ಸರ್ಕಾರ ಅನುಮತಿ ನೀಡಿದೆ.ಪರೀಕ್ಷೆಗಳು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ನಡೆಸಲಾಗುತ್ತದೆ.

ಕರ್ನಾಟಕ ಮುಕ್ತ ಶಾಲೆಪರೀಕ್ಷೆಯು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ತತ್ಸಮಾನವಾಗಿದೆ.ಕರ್ನಾಟಕ ಮುಕ್ತ ಶಾಲೆ ಕಲಿಕಾ ಕೇಂದ್ರಗಳಿಗೆ ಅನುಮತಿ ಮತ್ತು ಮಾನ್ಯತೆಯನ್ನು ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಇವರು ನೀಡುತ್ತಾರೆ.ಕಲಿಕಾ ಕೇಂದ್ರಗಳು ಸಮರ್ಪಕವಾಗಿ ನಡೆಯುತ್ತಿರುವ ಬಗ್ಗೆ, ಕರ್ನಾಟಕ ಮುಕ್ತ ಶಾಲೆ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳನ್ನು ನೇಮಿಸುವ ಬಗ್ಗೆ, ಕಲಿಕಾ ಸಾಮಾಗ್ರಿಗಳನ್ನು ಒದಗಿಸುವ ಮತ್ತು ತಯಾರಿಸುವ ಕಾರ್ಯ ಹಾಗೂ ಆಡಳಿತಾತ್ಮಕ ಕಾರ್ಯನಿರ್ವಹಣೆ ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ರವರದ್ದಾಗಿರುತ್ತದೆ.

➢ **ಕರ್ನಾಟಕ ಮುಕ್ತ ಶಾಲೆ ಪರೀಕ್ಷೆಯ ಗುರಿ :–**

1. ಪ್ರೌಢ ಶಿಕ್ಷಣ ಹಂತದ ಎಸ್.ಎಸ್.ಎಲ್.ಸಿ ಪರೀಕ್ಷೆಯ ತತ್ಸಮಾನದ ವಿದ್ಯಾರ್ಹತೆಯನ್ನು ಕರ್ನಾಟಕದ ಪ್ರತಿಯೊಬ್ಬ ಪ್ರಜೆಯು ಪಡೆಯುವಂತಾಗಬೇಕು.
2. ವ್ಯಾಸಂಗಕ್ಕೆ ಅಡೆತಡೆಯುಂಟಾಗಿರುವ ವಿದ್ಯಾರ್ಥಿಗಳು, ಯುವಕರು ಮತ್ತಿತರು ಎಸ್.ಎಸ್.ಎಲ್.ಸಿ ಪರೀಕ್ಷೆಯ ಕೆಲವೊಂದು ವಿಷಯಗಳಾದ ಗಣಿತ ಮತ್ತು ವಿಜ್ಞಾನ ಇಂತಹ ವಿಷಯಗಳನ್ನು ಗ್ರಹಿಸುವಲ್ಲಿ ತೊಡಕುಂಟಾಗಿರುವವರು ಬೇರೆ ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿ ಅಧ್ಯಯನ ಮಾಡಲು ಅನುವಾಗುವುದು.
3. ಮುಂದಿನ ವ್ಯಾಸಂಗ ಪಿ.ಯು.ಸಿ ತರಗತಿ ಮತ್ತು ತಾಂತ್ರಿಕ ಕಾಲೇಜು ಶಿಕ್ಷಣಕ್ಕೆ ವಿದ್ಯಾರ್ಥಿಗಳು ದಾಖಲಾಗಲು ಅನುವು ಮಾಡಿಕೊಡುವುದು.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು 2000ರಿಂದ ನಡೆಸಲಾಗುತ್ತಿದೆ. ಸರ್ಕಾರದ ಆದೇಶ ದಿನಾಂಕ:06.09.2006ರ ಪೂರ್ವದಲ್ಲಿ ಕರ್ನಾಟಕ ಮುಕ್ತ ಶಾಲೆ ಪರೀಕ್ಷೆಯು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ತತ್ಸಮಾನವಾಗಿರಲಿಲ್ಲ. ಕೇವಲ ಪ್ರಥಮ ಪಿ.ಯು.ಸಿಗೆ ದಾಖಲಾಗಲು ಮತ್ತು ತಾಂತ್ರಿಕ ವಿದ್ಯಾಭ್ಯಾಸವನ್ನು ಪಡೆಯಲು ಮಾತ್ರ ಸಾಧ್ಯವಾಗಿತ್ತು.

ಸರ್ಕಾರದ ಆದೇಶ ಸಂಖ್ಯೆ:ಇಡಿ.73.ಎಸ್.ಎಲ್.ಬಿ.2006 ಬೆಂಗಳೂರು ದಿನಾಂಕ:06.09.2006ರಂದು ಸರ್ಕಾರವು ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ರವರ 10ನೇ ತರಗತಿಯ ವಿದ್ಯಾರ್ಥಿಗಳಿಗೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಯನ್ನು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಮಾನವೆಂದು ಸರ್ಕಾರ ಆದೇಶಿಸಿದೆ.

➢ **ಪ್ರವೇಶಕ್ಕೆ ಅರ್ಹತೆ:–**

1. ಕರ್ನಾಟಕ ಮುಕ್ತ ವಿದ್ಯಾಲಯದ ಪ್ರೌಢ ಹಂತದಲ್ಲಿ ದಾಖಲಾತಿ ಪಡೆಯಲು ಸಂಬಂಧಿಸಿದ ಅಭ್ಯರ್ಥಿ 7ನೇ ತರಗತಿವರೆಗೆ ವ್ಯಾಸಂಗ ಮಾಡಿರಬೇಕು.(7ನೇ ತರಗತಿ ಪರೀಕ್ಷೆಯಲ್ಲಿ ಪಾಸಾಗುವುದು ಕಡ್ಡಾಯವಿಲ್ಲ.)
2. ಈ ಕೋರ್ಸಿಗೆ ನೋಂದಣಿಯಾಗುವವರು 15 ವರ್ಷಗಳ ವಯೋಮಿತಿಯುಳ್ಳವರು ಆಗಿರತಕ್ಕದ್ದು. ನಿಗಧಿತ ಕನಿಷ್ಠ 15 ವರ್ಷಗಳ ವಯೋಮಿತಿಯುಳ್ಳವರು ಆಗಿರತಕ್ಕದ್ದು. ನಿಗಧಿತ ಕನಿಷ್ಠ 15 ವರ್ಷಗಳ ವಯೋಮಿತಿಯನ್ನು ಲೆಕ್ಕಹಾಕುವಾಗ ಆಯಾಯಾ ಶೈಕ್ಷಣಿಕ ವರ್ಷದ ಮೇ ಒಂದನೇ ತಾರೀಖಿನಂದು(ಏಪ್ರಿಲ್/ಮೇ ಪರೀಕ್ಷೆಗಾಗಿ) ಮತ್ತು ನವೆಂಬರ್ ಒಂದನೇ ತಾರೀಖಿನಂದು (ನವೆಂಬರ್ ಪರೀಕ್ಷೆಗಾಗಿ) ಪೂರ್ಣಗೊಳಿಸಿದ ವರ್ಷಗಳನ್ನು ವಯಸ್ಸಾಗಿ ಪರಿಗಣಿಸತಕ್ಕದ್ದು.

- **ಕರ್ನಾಟಕ ಮುಕ್ತ ಶಾಲೆ ಪರೀಕ್ಷೆಯ ಅಧ್ಯಯನದ ವಿಷಯಗಳು:-**

(ಅ) ಭಾಷೆಗಳು:- ಕನ್ನಡ, ತಮಿಳು, ತೆಲುಗು, ಮಲಯಾಳಂ, ಮರಾಠಿ, ಹಿಂದಿ, ಉರ್ದು ಮತ್ತು ಇಂಗ್ಲೀಷ್ ಈ ಭಾಷೆಗಳ ಪೈಕಿ ಎರಡು ಭಾಷೆಗಳ ಜೊತೆಗೆ ಕನ್ನಡ ಭಾಷೆ ಕಡ್ಡಾಯವಾಗಿರತಕ್ಕದ್ದು- ಒಟ್ಟು ಮೂರು ಭಾಷೆಗಳುಆಯ್ಕೆ ಮಾಡಿಕೊಳ್ಳಬೇಕು.

(ಆ) ವಿಷಯಗಳು:- ಗಣಿತ, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ವಾಣಿಜ್ಯ ಅಧ್ಯಯನ, ಗೃಹವಿಜ್ಞಾನ, ಈ ವಿಷಯಗಳ ಪೈಕಿ ಯಾವುದೇ ಮೂರು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು. (ಗಣಿತ, ವಿಜ್ಞಾನ ಮತ್ತು ತಂತ್ರಜ್ಞಾನ ಕಡ್ಡಾಯವಲ್ಲ)

(ಅ) ರಾಷ್ಟ್ರೀಯ ಮುಕ್ತ ವಿದ್ಯಾಯಲಯದವರು ನಿಗಧಿಪಡಿಸಿರುವ ಕಲಿಕಾ ಸಾಮಗ್ರಿಗಳನ್ನು ಬಳಸುವುದು. ಕನ್ನಡ ಭಾಷಾ ವಿಷಯದಲ್ಲಿ ರಾಷ್ಟ್ರೀಯ ಮುಕ್ತ ವಿದ್ಯಾಲಯದ ಸಹಯೋಗದೊಡನೆ ಕರ್ನಾಟಕ ಮುಕ್ತ ವಿದ್ಯಾಲಯ ತಯಾರಿಸಿರುವ ಕನ್ನಡ ಕಲಿಕಾ ಸಾಮಾಗ್ರಿಗಳನ್ನು ಪಠ್ಯ ಪುಸ್ತಕ ನಿರ್ದೇಶನಾಲಯದ ಅನುಮೋದನೆಯೊಂದಿಗೆ ಬಳಸಲಾಗುತ್ತಿದೆ.

(ಇ) ತೃತೀಯ ಭಾಷೆ ಹಿಂದಿಯನ್ನು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ನಿಗಧಿ ಪಡಿಸಿರುವ ಪಠ್ಯವಸ್ತುವನ್ನು ಪಠ್ಯ ಪುಸ್ತಕ ನಿರ್ದೇಶನಾಲಯದ ಅನುಮೋದನೆಯೊಂದಿಗೆ ಬಳಸಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ.209.ಎಸ್.ಎಲ್.ಬಿ.2013; ದಿನಾಂಕ:06.12.2014ರನ್ವಯ ತಿದ್ದುಪಡಿ ಆದೇಶದನ್ವಯ ಎಸ್.ಎಸ್.ಎಲ್.ಸಿ ಸಮಯದಲ್ಲಿಯೇ ಕರ್ನಾಟಕ ಮುಕ್ತ ಶಾಲೆ ಪರೀಕ್ಷೆಯನ್ನು ಮಾರ್ಚ್/ಏಪ್ರಿಲ್‌ನಲ್ಲಿ ಹೊಸ ಮತ್ತು ಪುನರಾವರ್ತಿತ ವಿದ್ಯಾರ್ಥಿಗಳಿಗೆ ಹಾಗೂ ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಆಯಾ ವರ್ಷದ ಜೂನ್ ಮಾಹೆಯಲ್ಲಿ ಪೂರಕ ಪರೀಕ್ಷೆ ನಡೆಸಲು ಅನುಮತಿ ನೀಡಿದ್ದು, ಅದರಂತೆ ಮಾರ್ಚ್/ಏಪ್ರಿಲ್ 2015ನೇ ಸಾಲಿನಿಂದ ಹೊಸ ಮತ್ತು ಪುನರಾವರ್ತಿತ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲಾಗುತ್ತಿದೆ.ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಜೂನ್ ತಿಂಗಳಿನಲ್ಲಿ ಪೂರಕ ಪರೀಕ್ಷೆ ನಡೆಸಲಾಗುತ್ತಿದೆ.

ಪ್ರಥಮ ಬಾರಿಗೆ ಪರೀಕ್ಷೆ ತೆಗೆದುಕೊಳ್ಳುವ ಎಲ್ಲಾ ವಿದ್ಯಾರ್ಥಿಗಳಿಗೆ ಆರು ವಿಷಯಗಳು ಕಡ್ಡಾಯವಾಗಿದೆ.ಅವುಗಳಲ್ಲಿ ಪ್ರಥಮ ಭಾಷೆ-ಕನ್ನಡ ಮತ್ತು ಇನ್ನೆರಡು ಭಾಷಾ ವಿಷಯಗಳು ಕಡ್ಡಾಯವಾಗಿದೆ.ಕೋರ್ 06 ವಿಷಯಗಳಲ್ಲಿ ಯಾವುದಾದರೂ 03 ವಿಷಯಗಳನ್ನು ವಿದ್ಯಾರ್ಥಿಯು ಆಯ್ಕೆ ಮಾಡಿಕೊಳ್ಳಬಹುದು.ಒಮ್ಮೆ ಕೋರ್ ವಿಷಯಗಳನ್ನು ಆಯ್ಕೆ ಮಾಡಿದ ನಂತರ ಯಾವುದೇ ಮಾರ್ಪಡಿಗೆ ಅವಕಾಶವಿಲ್ಲ.

**ಈ ಕೆಳಕಂಡಂತೆ ಅಂಕಗಳನ್ನು ನಿಗಧಿಪಡಿಸಲಾಗಿದೆ.**

| ಕ್ರಮ ಸಂಖ್ಯೆ | ವಿಷಯ | ವಿಷಯ ಸಂಕೇತ | ಗರಿಷ್ಠ ಅಂಕಗಳು |
|---|---|---|---|
| 01 | ಪ್ರಥಮ ಭಾಷೆ ಕನ್ನಡ | 208 | 125 |
| 02 | ದ್ವಿತೀಯ ಭಾಷೆ ಇಂಗ್ಲೀಷ್ | 202 | 100 |
| 03 | ತೃತೀಯ ಭಾಷೆ ಹಿಂದಿ | 201 | 100 |
| | **ಕೋರ್ ವಿಷಯಗಳು** | | |
| 04 | ಗಣಿತ | 211 | 100 |
| 05 | ವಿಜ್ಞಾನ | 212 | 100 |
| 06 | ಸಮಾಜ ವಿಜ್ಞಾನ | 213 | 100 |
| 07 | ಅರ್ಥಶಾಸ್ತ್ರ | 214 | 100 |
| 08 | ವಾಣಿಜ್ಯ ಅಧ್ಯಯನ | 215 | 100 |
| 09 | ಗೃಹ ವಿಜ್ಞಾನ | 216 | 100 |

- **ತೃತೀಯ ಭಾಷೆ ಹಿಂದಿ ಪಠ್ಯ ವಸ್ತುವಿಗೆ ಸಂಬಂಧ ಪಟ್ಟಂತೆ:–**

ಸರ್ಕಾರದ ಆದೇಶದಂತೆ,

ಅ)ಮಾರ್ಚ್ 2015ರ ಪೂರ್ವದಲ್ಲಿ ಪರೀಕ್ಷೆ ತೆಗೆದುಕೊಂಡು ಅನುತ್ತೀರ್ಣ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ **ಹಿಂದಿ ವಿಷಯದ** ಹಳೇ ಪಠ್ಯವಸ್ತುವಿನಂತೆ, ಅಭ್ಯರ್ಥಿ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ.

ಆ)ಮಾರ್ಚ್ 2015ರಲ್ಲಿ ಪರೀಕ್ಷೆ ತೆಗೆದುಕೊಂಡು ಅನುತ್ತೀರ್ಣ ಹೊಂದಿರುವ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ ಹಿಂದಿ ಹೊಸ ಪಠ್ಯವಸ್ತುವಿನಂತೆ, ಅಭ್ಯರ್ಥಿ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ.

- **ನೋಂದಣಿ ಶುಲ್ಕ ಮತ್ತು ನವೀಕರಣ ಶುಲ್ಕ:–**

ಹೊಸದಾಗಿ ಪ್ರಾರಂಭವಾಗಿರುವ ಕರ್ನಾಟಕ ಮುಕ್ತ ಶಾಲೆ ಕಲಿಕಾ ಕೇಂದ್ರಗಳಿಗೆ ಹೊಸದಾಗಿ ಶಾಲಾ ಸಂಕೇತ ಪಡೆಯಲು ರೂ.1000/– ಮತ್ತು ಪ್ರತಿ ವರ್ಷವೂ ನವೀಕರಣ ಶುಲ್ಕ ರೂ.1000/– ಮಂಡಳಿಗೆ ಪಾವತಿಸಬೇಕಾಗಿದೆ.

- **ಪರೀಕ್ಷೆತೆಗೆದುಕೊಳ್ಳುವ ವಿದ್ಯಾರ್ಥಿಗಳ ವಿವರ**
- **ಹೊಸ ವಿದ್ಯಾರ್ಥಿಗಳು:–** ಕರ್ನಾಟಕ ಮುಕ್ತ ಶಾಲೆ ಕಲಿಕಾ ಕೇಂದ್ರದಲ್ಲಿ ಹೊಸದಾಗಿ ದಾಖಲಾತಿ ಹೊಂದಿದ್ದು, ಪ್ರಥಮ ಬಾರಿಗೆ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳನ್ನು ಹೊಸ ವಿದ್ಯಾರ್ಥಿಗಳೆಂದು (RF) ಗುರುತಿಸಲಾಗಿದೆ.

  **ಪುನರಾವರ್ತಿತ ವಿದ್ಯಾರ್ಥಿಗಳು:–** ಕರ್ನಾಟಕ ಮುಕ್ತ ಶಾಲೆ ಪರೀಕ್ಷೆಯಲ್ಲಿ ಅನುತ್ತೀರ್ಣ ವಿದ್ಯಾರ್ಥಿಗಳು ಪುನಃ ಪರೀಕ್ಷೆ ತೆಗೆದುಕೊಂಡಾಗ, ಪುನರಾವರ್ತಿತ ವಿದ್ಯಾರ್ಥಿಗಳೆಂದು(RR) ಗುರುತಿಸಲಾಗಿದೆ.

- **ಪರೀಕ್ಷಾ ಶುಲ್ಕ:–**

ಸರ್ಕಾರದ ಆದೇಶ ಸಂಖ್ಯೆ ಇಡಿ.32.ಎಸ್.ಎಲ್.ಬಿ.2013 ದಿನಾಂಕ:25.03.2013ರನ್ವಯ ಕರ್ನಾಟಕ ಮುಕ್ತ ಶಾಲೆ

ಪರೀಕ್ಷೆಗೆ ನಿಗಧಿಪಡಿಸಿರುವ ಪರೀಕ್ಷಾ ಶುಲ್ಕ ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ವಿದ್ಯಾರ್ಥಿಯ ವಿವರ | ಶುಲ್ಕದ ಮೊತ್ತ ರೂ.ಗಳಲ್ಲಿ |
|---|---|---|
| 01 | ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ (ಲ್ಯಾಮಿನೇಷನ್ ಶುಲ್ಕ ರೂ.25/-ಸೇರಿ) | 925-00 |
| 02 | ಅನುತ್ತೀರ್ಣ, ಪುನರಾವರ್ತಿತ ವಿದ್ಯಾರ್ಥಿಗಳಿಗೆ<br>ಅ) ಒಂದು ವಿಷಯಕ್ಕೆ<br>ಆ) ಎರಡು ವಿಷಯಗಳಿಗೆ<br>ಇ) ಮೂರು ವಿಷಯಗಳಿಗೆ<br>ಈ) ನಾಲ್ಕು ಮತ್ತು ಅದಕ್ಕೂ ಮೇಲ್ಪಟ್ಟ ವಿಷಯಗಳಿಗೆ | <br>150-00<br>300-00<br>500-00<br>900-00 |

- ಪ್ರಥಮ ಬಾರಿಗೆ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳು ಅಂಕಪಟ್ಟಿಯ ಲ್ಯಾಮಿನೇಷನ್ ಶುಲ್ಕ ರೂ.25/-ಗಳನ್ನು (ರೂ.900 ಶುಲ್ಕ + ರೂ.25/- ಲ್ಯಾಮಿನೇಷನ್ ಶುಲ್ಕ=ರೂ.925/-) ಪಾವತಿಸಬೇಕು.

➢ **ವಿಭಿನ್ನ ಸಾಮರ್ಥ್ಯವುಳ್ಳ(Differently Abled) ಮಕ್ಕಳಿಗೆ ನೀಡುವ ಸೌಲಭ್ಯಗಳು ಮತ್ತು ವಿನಾಯಿತಿ:-**

1. ಭಾರತ ಸರ್ಕಾರದ Minstry of Social Justice and Empowerment Department of Disability Affairs ಸಂಸ್ಥೆಯ ಪತ್ರ ಸಂಖ್ಯೆ F.NO.16-110/2003-DDIII ದಿನಾಂಕ:26.02.2013 ಹಾಗೂ ಕರ್ನಾಟಕ ಸರ್ಕಾರ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಸುತ್ತೋಲೆ ಸಂಖ್ಯೆ ವಿಹಿನಾಸಿಇ/ಅಧಿನಿಯಮ/07/2012-13; ದಿನಾಂಕ:20.05.2013ರನ್ವಯ ಕೆಳಕಂಡ ಸೌಲಭ್ಯಗಳನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಿದೆ.
2. ಸರ್ಕಾರದ ಆದೇಶದ ಸಂಖ್ಯೆ ಮಮಅ 65 ಪಿಹೆಚ್‌ಪಿ2000, ಬೆಂಗಳೂರು ದಿನಾಂಕ:10.03.2000ರನ್ವಯ, ಅಧಿಕೃತ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಸ್ಪಾಸ್ಟಿಕ್/ಕಿವುಡು/ಮೂಗ ಮತ್ತು ಕಲಿಕಾ ನ್ಯೂನತೆ ಹಾಗೂ ಬುದ್ಧಿ ಮಾಂದ್ಯ ವಿದ್ಯಾರ್ಥಿಗಳು ಶಿಕ್ಷಣ ಮಾಧ್ಯಮದ ಭಾಷೆಯ ಒಂದನ್ನು ಮಾತ್ರ ತೆಗೆದುಕೊಳ್ಳಬಹುದು. ಉಳಿದಎರಡು ಭಾಷಾ ವಿಷಯಗಳಿಗೆ ವಿನಾಯಿತಿ ಇರುತ್ತದೆ. ಈ ಬಗ್ಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಂದ ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಅನುಮತಿ ಪಡೆದುಕೊಂಡು ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಇವರ ಮುಖಾಂತರ ಮಂಡಳಿಗೆ ಪ್ರಸ್ತಾವನೆ ಸಲ್ಲಿಸುವುದು. ಈ ವಿಷಯದಲ್ಲಿ ಅಂತಹ ವಿದ್ಯಾರ್ಥಿಯ, ಪೋಷಕರಿಗೆ ಅನಾವಶ್ಯಕ ತೊಂದರೆ ನೀಡಬಾರದಾಗಿ ತಿಳಿಸಿದೆ.
3. ಭಾಷಾ ವಿನಾಯಿತಿಗಳ ಪ್ರಸ್ತಾವನೆಗಳನ್ನು ಜಿಲ್ಲಾ ಉಪನಿರ್ದೇಶಕರು ಪರಿಶೀಲಿಸಿ ವಿನಾಯಿತಿ ನೀಡುವ ಭಾಷಾ ವಿಷಯ ಮತ್ತು ವಿಷಯ ಸಂಕೇತಗಳನ್ನು ವಿವರಿಸಿರಬೇಕು. ವಿಕಲಚೇತನ (Physicaly challenged) ಮತ್ತು ಅಂಧ ವಿದ್ಯಾರ್ಥಿಗಳಿಗೆ ಭಾಷಾ ವಿನಾಯಿತಿ ನೀಡಲು ಅವಕಾಶವಿರುವುದಿಲ್ಲ. ಇದನ್ನು ಹೊರತುಪಡಿಸಿ ಉಳಿದಂತೆ ನೀಡುವ ಸೌಲಭ್ಯಗಳನ್ನು ವಿವರಿಸಿದ್ದು, ಅದರಂತೆ ಕ್ರಮವಹಿಸುವುದು.
4. ವಿಕಲ ಚೇತನ ಮಕ್ಕಳು ಬರಹಗಾರರ / ಓದುಗಾರರ ಸಹಾಯಕರ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ. ಬರಹಗಾರರ/ಓದುಗಾರರ ಆಯ್ಕೆ ಮಾಡಿಕೊಳ್ಳುವುದು ವಿದ್ಯಾರ್ಥಿಗಳ ವಿವೇಚನೆಗೆ ಬಿಟ್ಟಿದ್ದು, ಅವರಿಗೆ ಯಾವುದೇ ವಿದ್ಯಾರ್ಹತೆ ಮತ್ತು ವಯೋಮಿತಿಯನ್ನು ನಿಗದಿಪಡಿಸುವಂತಿಲ್ಲ. ಬರಹಗಾರರ/ಓದುಗಾರರ ಸಹಾಯಕರನ್ನು ಮಧ್ಯದಲ್ಲಿಬದಲಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

5. ವಿಕಲಚೇತನ ಮಕ್ಕಳಿಗೆ 3–00 ಘಂಟೆ ಅವಧಿಯ ಪರೀಕ್ಷೆಗೆ 1–00 ಘಂಟೆ "ಪರಿಹಾರ ಅವಧಿ" (Compensatory time) ಎಂಬುದಾಗಿ ಪರಿಗಣಿಸುವುದು. ಸದರಿ ವಿದ್ಯಾರ್ಥಿಗಳಿಗೆ ಸೂಕ್ತ ಆಸನ ವ್ಯವಸ್ಥೆಯನ್ನು ನೆಲಮಹಡಿಯಲ್ಲಿರುವಂತೆ ಮಾಡುವುದು.
6. ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ.142.ಯೋಯೋಕ:2009 ದಿನಾಂಕ:16.07.2009ರನ್ವಯ ಕಲಿಕಾ ನ್ಯೂನತೆ ಹೊಂದಿರುವ ವಿದ್ಯಾರ್ಥಿಗಳು ನಿಮ್ಹಾನ್ಸ್/ಅಖಿಲ ಭಾರತ ದೃಕ್–ಶ್ರವಣ ಸಂಸ್ಥೆ ಮೈಸೂರು/ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯಾವುದೇ ಮನಃಶಾಸ್ತ್ರಜ್ಞರು/ಕನಿಷ್ಠ ಎಂ.ಫಿಲ್ ವಿದ್ಯಾರ್ಹತೆ ಹೊಂದಿರುವ ಕ್ಲಿನಿಕಲ್ ಮನಃಶಾಸ್ತ್ರಜ್ಞರು ನೀಡಿರುವ ಪ್ರಮಾಣ ಪತ್ರಕ್ಕೆ ಜಿಲ್ಲಾ ಸರ್ಜನ್ ಶ್ರೇಣಿಗಿಂತಲೂ ಕಡಿಮೆ ಇಲ್ಲದ ಸರ್ಕಾರಿ ವೈದ್ಯರಿಂದ ದೃಢೀಕರಣ ಅಥವಾ ಮಲ್ಲೇಶ್ವರಂ, ಡಿಸ್‌ಲೆಕ್ಸಿಯಾ ಅಸೋಸಿಯೇಷನ್(ರಿ), ಬೆಂಗಳೂರು ಅಥವಾ ಭಾರತ ದೇಶದ ಯಾವುದೇ ಭಾಗದಿಂದ ಅಧೀಕೃತ ಜಿಲ್ಲಾ ಸರ್ಜನ್‌ಗಿಂತಲೂ ಕಡಿಮೆ ಇಲ್ಲದ ವೈದ್ಯರಿಂದ ಪಡೆದ ಪ್ರಮಾಣ ಪತ್ರದ ಪ್ರತಿಯನ್ನು ಓ.ಎಂ.ಆರ್‌ನೊಂದಿಗೆ ಸಲ್ಲಿಸುವುದು ಕಡ್ಡಾಯ. ತದನಂತರ ವಿನಾಯಿತಿ ಕೋರಿ ಬರುವ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ. ಈ ಬಗ್ಗೆ ವಿನಾಯಿತಿ ಪಡೆದುಕೊಳ್ಳಲು ಆಯಾ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು, ಪೂರ್ವಭಾವಿ ಕ್ರಮವಹಿಸಿ ಅಂತಹ ವಿದ್ಯಾರ್ಥಿಗಳಿಗೆ ಸದರಿ ಸೌಲಭ್ಯ ಒದಗಿಸಲು ನಿರ್ದೇಶಕರು, ಜೆ.ಎಸ್.ಎಸ್ ಮುಕ್ತ ವಿದ್ಯಾಲಯ, ಮೈಸೂರು ಇವರ ಮುಖಾಂತರ ಮಂಡಳಿಗೆ ಪ್ರಸ್ತಾವನೆ ಸಲ್ಲಿಸುವುದು.
7. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ142ಯೋಯೋಕಾ 2008 ದಿನಾಕ:21.02.2009ರ ಅನ್ವಯ, ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ವಿದ್ಯಾರ್ಥಿಗಳಲ್ಲಿ ಕಲಿಕಾ ನ್ಯೂನತೆ ಹೊಂದಿರುವ ವಿದ್ಯಾರ್ಥಿಗಳಿಗೆ (ಎಸ್.ಎಸ್.ಎಲ್.ಸಿ ಪರೀಕ್ಷೆಯಂತೆ) ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ.

1. ಪರೀಕ್ಷಾ ಸಂದರ್ಭದಲ್ಲಿ ಸರಳ ಕ್ಯಾಲುಕ್ಯಲೇಟರ್ ಉಪಯೋಗಿಸಲು ಅನುಮತಿಸಲಾಗಿದೆ.

2. ಈ ಮಕ್ಕಳಿಗೆ ಪ್ರಶ್ನೆಗಳನ್ನು ಓದಲು ಪೋಷಕರ ವೆಚ್ಚದಲ್ಲಿ ಸಹಾಯಕರನ್ನು ಪಡೆಯಲು ಅನುಮತಿಸಿದೆ.

➢ **<u>ವಿಭಿನ್ನ ಸಾಮರ್ಥ್ಯವುಳ್ಳ(Differently Abled) ಮಕ್ಕಳಿಗೆ ನೀಡಬಹುದಾದ ವಿಶೇಷ ಸೌಲಭ್ಯದ ವಿವರಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.</u>**

| **ನ್ಯೂನತೆ** | **ಸೌಲಭ್ಯಗಳು/ವಿನಾಯಿತಿಗಳು** |
|---|---|
| ಕಿವುಡ ಮತ್ತು ಮೂಗ | ➢ ಶಿಕ್ಷಣದ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿಯಿರುತ್ತದೆ.<br>➢ ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ. |
| ಕಲಿಕಾ ನ್ಯೂನತೆ/ಡಿಸ್‌ಲೆಕ್ಸಿಯಾ(Dyslexia) Specific learning disability | ➢ ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿ ಇರುತ್ತದೆ.<br>➢ ಪ್ರಶ್ನೆಗಳನ್ನು ಓದಲು ಪೋಷಕರ ವೆಚ್ಚದಲ್ಲಿಯೇ ಸಹಾಯಕರನ್ನು ಪಡೆದುಕೊಳ್ಳಲು ಅವಕಾಶವಿರುವುದು.<br>➢ ಇಂತಹ ಮಕ್ಕಳು ಮಾಡುವ ಸಣ್ಣಪುಟ್ಟ ದೋಷಗಳನ್ನು ಮೌಲ್ಯಮಾಪನದಲ್ಲಿ ಪರಿಗಣಿಸುವುದಿಲ್ಲ.<br>➢ ಪರೀಕ್ಷಾ ಸಂದರ್ಭದಲ್ಲಿ ಸರಳ ಕ್ಯಾಲುಕ್ಯುಲೇಟರ್ ಉಪಯೋಗಿಸಲು ಅನುಮತಿಸಲಾಗಿದೆ. |

| | |
|---|---|
| ಬುದ್ಧಿಮಾಂದ್ಯ | ➢ ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿಯಿರುತ್ತದೆ.<br>➢ ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ. |
| ಅಂಧ ವಿದ್ಯಾರ್ಥಿಗಳು/ದೃಷ್ಟಿಮಾಂದ್ಯ ವಿದ್ಯಾರ್ಥಿ/ಕ್ಷೀಣದೃಷ್ಟಿ(LOW VISION) | ➢ ಬರಹಗಾರರ ಸೌಲಭ್ಯ ನೀಡಲಾಗುವುದು.<br>➢ ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ. |
| ಮೆದುಳಿನ ಪಾರ್ಶ್ವವಾಯು, ಬಲತೋಳಿನ ಮತ್ತು ಬಲಗೈನ ಕೆಳತುದಿಯು ಸರಿಯಾಗಿ ಬೆಳವಣಿಗೆಯನ್ನು ಹೊಂದದೆ ಇರುವುದು, ಬಲಗೈ ಇದ್ದ ವ್ಯಕ್ತಿಯು ದಿನನಿತ್ಯದ ಕಾರ್ಯಗಳಿಗೆ ಬಲಗೈಯನ್ನೇ ಬಳಸುತ್ತಿದ್ದು, ಎಡಗೈಯಲ್ಲಿ ಬರೆಯುವುದರಿಂದ ಬರವಣಿಗೆ ನಿಧಾನವಾಗುತ್ತದೆ ಎನ್ನುವವರಿಗೆ | ➢ ಹೆಚ್ಚುವರಿ ಸಮಯ ನೀಡುವ ಸೌಲಭ್ಯ<br>➢ 2.30 ಹಾಗೂ 3 ಘಂಟೆಗಳ ಅವಧಿಯ ಪ್ರಶ್ನೆ ಪತ್ರಿಕೆಗೆ ಒಂದು ಘಂಟೆ<br>➢ 2 ಘಂಟೆಗಳ ಅವಧಿಯ ಪ್ರಶ್ನೆ ಪತ್ರಿಕೆಗೆ 45 ನಿಮಿಷಗಳು<br>➢ 1 ಘಂಟೆಯ ಅವಧಿಯ ಪ್ರಶ್ನೆ ಪತ್ರಿಕೆಗೆ 30 ನಿಮಿಷಗಳು |
| ಎಲ್ಲಾ ರೀತಿಯ ನ್ಯೂನ್ಯತೆ | ➢ ವಿದ್ಯಾರ್ಥಿಗಳು ಸುಗಮವಾಗಿ ಪರೀಕ್ಷೆ ಬರೆಯಲು ನೆಲಮಹಡಿಯ ಸೂಕ್ತ ಆಸನ ವ್ಯವಸ್ಥೆ ಮಾಡುವುದು. |

- **ಕರ್ನಾಟಕ ಮುಕ್ತ ಶಾಲೆ ಪರೀಕ್ಷೆಯ ನಾಮಿನಲ್‌ರೋಲ್:-** ಮಂಡಳಿಯಿಂದ ಕಳುಹಿಸುವ ನಮೂನೆಯಲ್ಲಿ ವಿದ್ಯಾರ್ಥಿಯ ಹೆಸರು, ವಿದ್ಯಾರ್ಥಿಯ ತಂದೆಯ ಹೆಸರು ಮತ್ತು ವಿದ್ಯಾರ್ಥಿಯ ತಾಯಿಯ ಹೆಸರನ್ನು ಹಾಗೂ ಜನ್ಮ ದಿನಾಂಕವನ್ನು ಪ್ರಾಥಮಿಕ ಶಾಲಾ ದಾಖಲಾತಿಯಲ್ಲಿರುವಂತೆ, ನಮೂದಿಸಬೇಕಾಗಿದೆ. ವಿದ್ಯಾರ್ಥಿಯು ಆಯ್ಕೆ ಮಾಡಿರುವ ಐಚ್ಛಿಕ ವಿಷಯಗಳನ್ನು ತಪ್ಪಿಲ್ಲದೇ ನಮೂದಿಸಬೇಕಾಗಿದೆ. ಇವುಗಳನ್ನು ಆಯಾ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ಸರಿಯಾಗಿರುವುದನ್ನು ಪರಿಶೀಲಿಸಿ ದೃಢೀಕರಿಸಬೇಕು. ನೀಡಿರುವ ಮಾಹಿತಿಯು ಸರಿಯಿದೆಯೇ? ಎಂಬುದಕ್ಕೆ ಪೂರಕ ದಾಖಲೆಗಳನ್ನು ಪರಿಶೀಲಿಸಿ, ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ ಮೈಸೂರುರವರು ಮೇಲು ಸಹಿ ಮಾಡಬೇಕು. ನಾಮಿನಲ್ ರೋಲ್ ಜೊತೆಗೆ ಮಂಡಳಿಯಿಂದ ನೀಡುವ ಓ.ಎಂ.ಆರ್‌ನಲ್ಲಿ ತಪ್ಪಿಲ್ಲದೇ ನಾಮಿನಲ್‌ರೋಲ್‌ನಲ್ಲಿರುವಂತೆ, ಕರ್ನಾಟಕ ಮುಕ್ತ ಶಾಲೆ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ಭರ್ತಿ ಮಾಡಿ, ಸರಿಯಾಗಿ ಶೇಡ್ ಮಾಡಿ ಸಹಿ ಮತ್ತು ಮೊಹರಿನೊಂದಿಗೆ ಮಂಡಳಿಗೆ ಸಲ್ಲಿಸುವುದು.

- **<u>ಎಂ.ಎಸ್.ಎ(Marks Statement Cum-Applications) ಪರೀಕ್ಷಾ ಅರ್ಜಿ:-</u>**

1. ಅನುತ್ತೀರ್ಣರಾದ ಕರ್ನಾಟಕ ಮುಕ್ತ ಶಾಲೆ ವಿದ್ಯಾರ್ಥಿಗಳ ಎಂ.ಎಸ್.ಎಗಳನ್ನು ನೀಡಲಾಗುತ್ತದೆ. ಎಂ.ಎಸ್.ಎಯಲ್ಲಿ **<u>ಫಲಿತಾಂಶ ಪಟ್ಟಿಯಲ್ಲಿರುವಂತೆ ಸಂಸ್ಥೆಯ ಮುಖ್ಯಸ್ಥರು ಪರಿಶೀಲಿಸಿ ದೃಢೀಕರಿಸುವುದು.</u>**
2. ಮುದ್ರಿತ ಎಂ.ಎಸ್.ಎಯಲ್ಲಿ ವಿದ್ಯಾರ್ಥಿ ಭಾವಚಿತ್ರ ಅಂಟಿಸಿ ನಿಗಧಿತ ಅಂಕಣದಲ್ಲಿ ವಿದ್ಯಾರ್ಥಿಯಿಂದ ಸಹಿ ಪಡೆದು ದೃಢೀಕರಿಸಿ ಮಂಡಳಿಗೆ ಸಲ್ಲಿಸುವುದು.

3. ಯಾವುದೇ ವಿದ್ಯಾರ್ಥಿಯ ಎಂ.ಎಸ್.ಎ ಲಭ್ಯವಿಲ್ಲದಿದ್ದಲ್ಲಿ, ಮುದ್ರಿತ ಎಂ.ಎಸ್.ಎಯನ್ನು ಮಂಡಳಿಯಿಂದ ಪಡೆಯತಕ್ಕದ್ದು, ಇದಕ್ಕಾಗಿ ರೂ.50/- ಶುಲ್ಕ ನಿಗಧಿಪಡಿಸಿದೆ.

- **ಚೆಕ್‌ಲಿಸ್ಟ್ ನಾಮಿನಲ್‌ರೋಲ್**:- ಕರ್ನಾಟಕ ಮುಕ್ತ ಶಾಲೆವಿದ್ಯಾರ್ಥಿಗಳ ಶುಲ್ಕ ಪಾವತಿಯಾದ ನಂತರ ಹಾಗೂ ಓ.ಎಂ.ಆರ್ ಸ್ಕ್ಯಾನ್ ಡೇಟಾ ಮಾಹಿತಿಯನ್ನು ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳ ಎಂ.ಎಸ್.ಎ Extract ಮಾಹಿತಿಯನ್ನು ಚೆಕ್‌ಲಿಸ್ಟ್ ನಾಮಿನಲ್‌ರೋಲ್ ತಯಾರಿಸಿ, ಸಂಸ್ಥೆಗಳಿಗೆ ಕಳುಹಿಸಲಾಗುತ್ತದೆ. ಇವುಗಳಲ್ಲಿನ ಲೋಪದೋಷಗಳನ್ನು ತಿದ್ದುಪಡಿಮಾಡಿ ಕೆ.ಓ.ಎಸ್ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ದೃಢೀಕರಿಸಿ ಮಂಡಳಿಗೆ ಸಲ್ಲಿಸುವುದು.
- **ಪರೀಕ್ಷಾ ಕೇಂದ್ರಗಳ ಬಗ್ಗೆ**:- ಸಾಮಾನ್ಯವಾಗಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಜಿಲ್ಲಾ ಹಂತದಲ್ಲಿ ಕರ್ನಾಟಕ ಮುಕ್ತ ಶಾಲೆ ಪರೀಕ್ಷೆ ನಡೆಸಲಾಗುತ್ತಿದೆ. ಡಯಟ್ ಪ್ರಾಂಶುಪಾಲರು ಆಯ್ಕೆ ಮಾಡಿ ಸೂಚಿಸುವ ಪರೀಕ್ಷಾ ಕೇಂದ್ರಗಳನ್ನು ಮಂಡಳಿ ನಿರ್ಧರಿಸುವುದು.
- **ನೋಡಲ್ ಅಧಿಕಾರಿಗಳ ನೇಮಕ**:- ಜಿಲ್ಲಾ ಹಂತದಲ್ಲಿ ಆಯಾ ಡಯಟ್ ಪ್ರಾಂಶುಪಾಲರು ಸೂಚಿಸಿ ನೇಮಿಸುವ ಅಧಿಕಾರಿಯನ್ನು ಆಯಾ ಪರೀಕ್ಷಾ ಕಾರ್ಯದ ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗುವುದು. ಪರೀಕ್ಷಾ ನಾಮಿನಲ್‌ರೋಲ್ ಸಲ್ಲಿಸುವುದರಿಂದ ಮೊದಲುಗೊಂಡು, ಅಂಕಪಟ್ಟಿ ವಿತರಣೆಯವರೆಗೂ ವಿವಿಧ ಹಂತಗಳ ಮಾಹಿತಿಯನ್ನು ನೀಡುವ ಮತ್ತು ಉಸ್ತುವಾರಿಯನ್ನು ನೋಡಲ್ ಅಧಿಕಾರಿಗಳಿಗೆ ವಹಿಸಿರುತ್ತಾರೆ. ಡಯಟ್ ಪ್ರಾಂಶುಪಾಲರು ನೋಡಲ್ ಅಧಿಕಾರಿಗಳ ಸಹಯೋಗದೊಂದಿಗೆ ಕಾರ್ಯ ನಿರ್ವಹಿಸಬೇಕಾಗಿರುತ್ತದೆ.
- **ಪರೀಕ್ಷಾ ಕೇಂದ್ರಗಳಿಗೆ ಮುಖ್ಯ ಅಧೀಕ್ಷಕರು ಮತ್ತು ಅಭಿರಕ್ಷಕರ ನೇಮಕ**:- ಪ್ರತಿಯೊಂದು ಪರೀಕ್ಷಾ ಕೇಂದ್ರಕ್ಕೂ ಡಯಟ್ ಪ್ರಾಂಶುಪಾಲರಿಂದ ಸೂಚಿಸುವ ಮುಖ್ಯ ಅಧೀಕ್ಷಕರು ಹಾಗೂ ಅಭಿರಕ್ಷಕರನ್ನು ಮಂಡಳಿ ನೇಮಿಸುತ್ತದೆ. ಮುಖ್ಯ ಅಧೀಕ್ಷಕರು ತಮ್ಮ ಪರೀಕ್ಷಾ ಕೇಂದ್ರದ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಈ ಬಗ್ಗೆ ಮುಖ್ಯ ಅಧೀಕ್ಷಕರು, ಅಭಿರಕ್ಷಕರು ನಿರ್ವಹಿಸಬೇಕಾಗಿರುವ ಕಾರ್ಯದ ಸಂಪೂರ್ಣ ವಿವರಗಳನ್ನೊಳಗೊಂಡ ಸುತ್ತೋಲೆಯನ್ನು ಹೊರಡಿಸಲಾಗುವುದು. (ಸುತ್ತೋಲೆಗಳ ಮಾದರಿಯನ್ನು ಮುಂದೆ ನೀಡಿದೆ.)
- **ಪರೀಕ್ಷಾ ವೇಳಾಪಟ್ಟಿ**:- ಕರ್ನಾಟಕ ಮುಕ್ತ ಶಾಲೆ ಪರೀಕ್ಷಾ ವೇಳಾಪಟ್ಟಿಯನ್ನು ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳಿಗೆ ಕಳುಹಿಸಲಾಗುತ್ತದೆ ಹಾಗೂ ಅಂತರ್ಜಾಲದಲ್ಲಿ ಪ್ರಕಟಿಸಲಾಗುತ್ತದೆ.
- **ಪ್ರವೇಶ ಪತ್ರ**:- ಚೆಕ್‌ಲಿಸ್ಟ್ ನಾಮಿನಲ್‌ರೋಲ್ ಸಂಸ್ಥೆಗಳಿಂದ ಬಂದ ನಂತರ, ಅವುಗಳಲ್ಲಿನ ತಿದ್ದುಪಡಿಗಳನ್ನು ಮಂಡಳಿ ಅಳವಡಿಸಿ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಮುದ್ರಿಸಿ ನೀಡಲಾಗುತ್ತದೆ. ಪರೀಕ್ಷಾ ವೇಳಾಪಟ್ಟಿ ಸಲ್ಲಿಸಲಾಗುತ್ತದೆ ಹಾಗೂ ಪ್ರವೇಶ ಪತ್ರಗಳನ್ನು ಕಳುಹಿಸಿದ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಲಾಗುತ್ತದೆ. ಪ್ರವೇಶ ಪತ್ರಗಳಲ್ಲಿ ತಿದ್ದುಪಡಿಗಳಿದ್ದಲ್ಲಿ, ಪ್ರವೇಶ ಪತ್ರದ ಛಾಯಾ ಪ್ರತಿಯ ಮೇಲೆ ಕೆಂಪು ಶಾಹಿಯಲ್ಲಿ ತಿದ್ದುಪಡಿ ಮಾಡಿ, ಒಂದು ವೇಳೆ ಮಾಧ್ಯಮ ಬದಲಾವಣೆ ಇದ್ದಲ್ಲಿ, ವಿಷಯಗಳ ಬದಲಾವಣೆಯಿದ್ದಲ್ಲಿ, ವಿದ್ಯಾರ್ಥಿಯ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜನ್ಮದಿನಾಂಕ ಮತ್ತು

ಭಾವಚಿತ್ರ ಇತ್ಯಾದಿಗಳ ವ್ಯತ್ಯಾಸವಿದ್ದಲ್ಲಿ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು ದೃಢೀಕರಿಸಿ ಕಳುಹಿಸಲು ಅವಕಾಶ ಕಲ್ಪಿಸಲಾಗಿದೆ.

- **ಪರೀಕ್ಷಾ ಕೇಂದ್ರವಾರು ನಾಮಪಟ್ಟಿ ತಯಾರಿಕೆ:–** ಆಯಾ ಪರೀಕ್ಷಾ ಕೇಂದ್ರವಾರು ತೆಗೆದುಕೊಳ್ಳುವ ವಿದ್ಯಾರ್ಥಿಗಳ ಹೆಸರು ಮತ್ತಿತರೆ ವಿವರಗಳನ್ನೊಳಗೊಂಡ ಭಾವಚಿತ್ರವಿರುವ ಸಿ.ಎನ್.ಆರ್‌ಗಳನ್ನು ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಲಾಗುತ್ತದೆ. ಪ್ರವೇಶ ಪತ್ರದಲ್ಲಿರುವ ಭಾವಚಿತ್ರವು, ಸಿ.ಎನ್.ಆರ್‌ನಲ್ಲಿರುವ ಭಾವಚಿತ್ರ ಮತ್ತು ವಿದ್ಯಾರ್ಥಿಯ ಸಹಿಯನ್ನು ಒಂದಕ್ಕೊಂದು ತಾಳೆ ಮಾಡಿ, ಪ್ರವೇಶ ಪತ್ರವನ್ನು ಹಾಜರುಪಡಿಸುವ ವಿದ್ಯಾರ್ಥಿಗೆ ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ನೀಡಬಹುದು.
- **ಪರೀಕ್ಷಾ ಕೇಂದ್ರಗಳಲ್ಲಿ ಸ್ಥಾನಿಕ ಜಾಗೃತದಳ ಮತ್ತು ವಿಚಕ್ಷಣ ಜಾಗೃತದಳ ನೇಮಕ:–** ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು, ಪರೀಕ್ಷೆಯ ಸುವ್ಯವಸ್ಥಿತವಾಗಿ ನಡೆಯಲು ಪರೀಕ್ಷಾ ಪಾವಿತ್ರ್ಯತೆಯನ್ನು ಕಾಪಾಡಲು ಯಾವುದೇ ನಕಲು ಹಾಗೂ ಬದಲಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗದಿರುವಂತೆ, ಎಚ್ಚರವಹಿಸಲು ಸ್ಥಾನಿಕ ಜಾಗೃತದಳ ಮತ್ತು ವಿಚಕ್ಷಣ ಜಾಗೃತದಳಗಳನ್ನು ನೇಮಿಸುವರು.
- **ಪರೀಕ್ಷಾ ಅವ್ಯವಹಾರ:–** ಪರೀಕ್ಷಾ ಅಕ್ರಮಗಳಿಗೆ, ಪರೀಕ್ಷೆಗೆ ಮೊದಲು ತಪ್ಪು ಮಾಹಿತಿ ನೀಡುವ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳ ಮೇಲೆ, ಮಂಡಳಿಯು ದಂಡ ವಿಧಿಸುತ್ತದೆ. ಅದೇ ರೀತಿ ನಾಮಿನಲ್‌ರೋಲ್ ಸಲ್ಲಿಸುವಾಗ, ತಪ್ಪು ಮಾಹಿತಿ ನೀಡಿದಾಗ ಮಂಡಳಿ ದಂಡ ವಿಧಿಸುತ್ತದೆ ಹಾಗೂ ಶಿಸ್ತು ಕ್ರಮಕೈಗೊಳ್ಳುತ್ತದೆ. ಅಲ್ಲದೇ ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿ, ಮೇಲ್ವಿಚಾರಕರು, ಪರೀಕ್ಷಾ ಮುಖ್ಯ ಅಧೀಕ್ಷಕರು ಎಸಗುವ ತಪ್ಪುಗಳಿಗೆ ಮಂಡಳಿ ದಂಡ ವಿಧಿಸುತ್ತದೆ ಮತ್ತು ಶಿಸ್ತುಕ್ರಮಕೈಗೊಳ್ಳುತ್ತದೆ. ಪರೀಕ್ಷಾ ಕಾರ್ಯವಾದ ನಂತರ ಮೌಲ್ಯಮಾಪನ ಸಮಯದಲ್ಲಿ ಗಮನಕ್ಕೆ ಬರುವ ಕೆಲವೊಂದು ಲೋಪದೋಷಗಳು, ತಪ್ಪುಗಳಿಗೆ ಆಯಾ ಪರೀಕ್ಷಾ ಮುಖ್ಯ ಅಧೀಕ್ಷಕರು, ಮೇಲ್ವಿಚಾರಕರಿಗೆ ಮಂಡಳಿಯಿಂದ ಶಿಸ್ತು ಕ್ರಮ ಜರುಗಿಸಲಾಗುವುದು.
- **ಮೌಲ್ಯಮಾಪನ ಪ್ರಕ್ರಿಯೆ:–** ಎಸ್.ಎಸ್.ಎಲ್.ಸಿ ಪರೀಕ್ಷೆಯ ಮೌಲ್ಯಮಾಪನ ಕಾರ್ಯಕ್ಕೆ ನೋಂದಾಯಿಸಿಕೊಂಡಿರುವ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರೌಢ ಶಾಲೆಗಳಲ್ಲಿ ಕಾರ್ಯ ನಿರ್ವಹಿಸಿರುವ ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರ ಸೇವಾ ಜೇಷ್ಠತೆಯಾನುಸಾರ ಗಣನೆಗೆ ತೆಗೆದುಕೊಂಡು, ಅವರುಗಳನ್ನೇ ಆಯಾ ವಿಷಯಕ್ಕೆ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಉಪಮುಖ್ಯ ಮೌಲ್ಯಮಾಪಕರು ಮತ್ತು ಮೌಲ್ಯಮಾಪಕರುಗಳನ್ನು ಮಂಡಳಿಯು ನೇಮಿಸಿ ಆದೇಶಿಸುತ್ತದೆ.
- ಮೌಲ್ಯಮಾಪನಕಾರ್ಯಕ್ಕೆ ನೇಮಕಗೊಂಡ ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರು ಕಡ್ಡಾಯವಾಗಿ ಮೌಲ್ಯಮಾಪನ ಕೇಂದ್ರಕ್ಕೆ ಹಾಜರಾಗಬೇಕಾಗಿದೆ. ಗೈರು ಹಾಜರಾದಲ್ಲಿ ಈ ಕಛೇರಿ ಸುತ್ತೋಲೆ ಸಂಖ್ಯೆ:ಎ7.ಪ.ಮೌ.ಮಾ.ಕ/36/2012–13; ದಿನಾಂಕ:24.12.2012ರನ್ವಯ ಕೆ.ಸಿ.ಎಸ್.ಆರ್(ಸಿಸಿಎ) 1957ರ ನಿಯಮಗಳನ್ವಯ ಶಿಸ್ತು ಕ್ರಮಕೈಗೊಳ್ಳಲು ಮಂಡಳಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. (ಅಧಿಸೂಚನೆ ಅನುಬಂಧದಲ್ಲಿ ನೀಡಿದೆ)
- ಮೌಲ್ಯಮಾಪನವನ್ನು ಮಂಡಳಿಯು ನಿರ್ಧರಿಸುವ ಮೌಲ್ಯಮಾಪನ ಕೇಂದ್ರಗಳಲ್ಲಿ ನಡೆಸಲಾಗುತ್ತದೆ.

➤ **ಫಲಿತಾಂಶ ಪ್ರಕಟಣೆ ಮತ್ತು ತೇರ್ಗಡೆ:–**

ವಿದ್ಯಾರ್ಥಿಯು ಪ್ರಥಮ ಭಾಷೆ–ಕನ್ನಡ 125 ಅಂಕಗಳಿಗೆ ಕನಿಷ್ಠ 38 ಮತ್ತು ಇತರೆ ವಿಷಯಗಳಲ್ಲಿ 100 ಅಂಕಗಳಿಗೆ ಕನಿಷ್ಠ 30 ಅಂಕಗಳನ್ನು ಒಟ್ಟಾರೆ ಶೇ.35 ಅಂಕಗಳನ್ನು ಗಳಿಸಿರಬೇಕು.

(ii) ವಿದ್ಯಾರ್ಥಿಯು ತೇರ್ಗಡೆ ಹೊಂದಲು 625 ಅಂಕಗಳಿಗೆ ಕನಿಷ್ಠ 219 ಅಂಕ ಪಡೆದಿರಬೇಕು. (ಶೇ.35) ವಿದ್ಯಾರ್ಥಿಯು ತೇರ್ಗಡೆಗೆ ಪ್ರತಿ ವಿಷಯದಲ್ಲಿ ಶೇ.30 ಅಂಕಗಳನ್ನು ಒಟ್ಟಾರೆ ಶೇ.35 ಅಂಕಗಳನ್ನು ಪಡೆಯುವುದು ಕಡ್ಡಾಯವಾಗಿದೆ.

(iii) ಅನುತ್ತೀರ್ಣ ಪುನರಾವರ್ತಿತ ವಿದ್ಯಾರ್ಥಿಗಳು ತೇರ್ಗಡೆ ಹೊಂದಲು ಪ್ರಥಮ ಭಾಷೆ ಕನ್ನಡ–125 ಅಂಕಗಳಿಗೆ ಕನಿಷ್ಠ–44 ಅಂಕಗಳು ಹಾಗೂ ಇತರೆ ವಿಷಯಗಳಲ್ಲಿ ಕನಿಷ್ಠ 35 ಅಂಕಗಳನ್ನು ಪಡೆದಿರಬೇಕು. ಶೇ.35 ಅಂಕಗಳಿಗಿಂತ ಕಡಿಮೆ ಗಳಿಸಿರುವ ಅಂದರೆ ಪ್ರಥಮ ಭಾಷೆ ಕನ್ನಡ 44 ಅಂಕಗಳಿಗಿಂತ ಕಡಿಮೆ ಅಂಕಗಳನ್ನು ಪಡೆದಿರುವ ಮತ್ತು ಇತರೆ ವಿಷಯಗಳಲ್ಲಿ 35 ಅಂಕಗಳಿಗಿಂತ ಕಡಿಮೆ ಅಂಕಗಳನ್ನು ಪಡೆದಿರುವ ವಿಷಯಗಳಿಗೆ ಪುನಃ ಪರೀಕ್ಷೆ ತೆಗೆದುಕೊಳ್ಳಬೇಕಾಗಿರುವುದು ಕಡ್ಡಾಯವಾಗಿದೆ.

➤ **ಅಂಕಗಳು ಮತ್ತು ದರ್ಜೆಗಳ ವಿವರ:–**

**ಒಟ್ಟು 625 ಅಂಕಗಳಿಗೆ**

| **ಕ್ರಮ ಸಂಖ್ಯೆ** | **ಶೇಕಡ** | **ದರ್ಜೆ** |
|---|---|---|
| **01** | ಶೇಕಡ 85 ಮತ್ತು ಅದಕ್ಕಿಂತ ಮೇಲ್ಪಟ್ಟು | ಡಿಸ್ಟಿಂಕ್‌ಷನ್ |
| **02** | ಶೇಕಡ 60 ಮತ್ತು ಅದಕ್ಕಿಂತ ಮೇಲ್ಪಟ್ಟು ಮತ್ತು ಶೇಕಡ 85ರೊಳಗೆ | ಪ್ರಥಮ ದರ್ಜೆ |
| **03** | ಶೇಕಡ 50 ಮತ್ತು ಅದಕ್ಕಿಂತ ಮೇಲ್ಪಟ್ಟು ಮತ್ತು ಶೇಕಡ 60ರೊಳಗೆ | ದ್ವಿತೀಯ ದರ್ಜೆ |
| **ಒಂದೇ ಬಾರಿಗೆ ತೇರ್ಗಡೆಯಾದವರಿಗೆ ಮಾತ್ರ ದರ್ಜೆ ನೀಡಲಾಗುವುದು** | | |

➤ **ಅನುತ್ತೀರ್ಣ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಪ್ರಯತ್ನಗಳ ಮಿತಿ ನಿಗಧಿಗೊಳಿಸುವ ಬಗ್ಗೆ;–**

ಸರ್ಕಾರದ ಆದೇಶ ಸಂಖ್ಯೆ:ಇಡಿ.209.ಎಸ್.ಎಲ್.ಬಿ.2013;ದಿನಾಂಕ:06.12.2014ರನ್ವಯ ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಪರೀಕ್ಷೆಯಲ್ಲಿ ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಉತ್ತೀರ್ಣ ಹೊಂದಲು ಸತತವಾಗಿ ಆರು ಪ್ರಯತ್ನಗಳ ಮಿತಿಯನ್ನು ನಿಗಧಿಗೊಳಿಸಿದೆ.

ಸರ್ಕಾರದ ದಿನಾಂಕ:06.12.2014ರ ಪೂರ್ವದಲ್ಲಿ ಪರೀಕ್ಷೆ ಬರೆದು ಅನುತ್ತೀರ್ಣ ಹೊಂದಿರುವ ವಿದ್ಯಾರ್ಥಿಗಳು ಉತ್ತೀರ್ಣ ಹೊಂದಲು ಸತತವಾಗಿ 09 ಪ್ರಯತ್ನಗಳ ಮಿತಿಯನ್ನು NIOS ನಿಯಮಗಳಂತೆ, ನಿಗಧಿಪಡಿಸಿರುವುದನ್ನು ಮುಂದುವರಿಸಿದೆ.

➤ **ಫಲಿತಾಂಶ ಉತ್ತಮ ಪಡಿಸಿಕೊಳ್ಳುವಿಕೆ.**

1. ಮಂಡಳಿಯ ನಿಯಮದಂತೆ, ಎಸ್.ಎಸ್.ಎಲ್.ಸಿ ಪರೀಕ್ಷೆಯಂತೆ, ಕರ್ನಾಟಕ ಮುಕ್ತ ಶಾಲೆ ಪರೀಕ್ಷೆಗೆ ಹಾಜರಾಗಿ ನಿರೀಕ್ಷಿಸಿದ್ದ ಫಲಿತಾಂಶ ಬಾರದಿದ್ದ ಸಂದರ್ಭಗಳಲ್ಲಿ, ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಸೌಲಭ್ಯ ಬಯಸುವ ಕರ್ನಾಟಕ ಮುಕ್ತ ಶಾಲೆವಿದ್ಯಾರ್ಥಿಗಳು ಕರ್ನಾಟಕ ಮುಕ್ತ ಶಾಲೆ ಪರೀಕ್ಷೆಯನ್ನು ಮೊದಲನೇ ಬಾರಿ ಎಲ್ಲಾ ವಿಷಯಗಳಲ್ಲಿ ತೇರ್ಗಡೆ ಹೊಂದಿದ್ದು, ತೇರ್ಗಡೆಯಾದ ಎರಡು ವರ್ಷಗಳಅವಧಿಯಲ್ಲಿ ಯಾವುದಾದರೂ ವಿಷಯ ಅಥವಾ ಎಲ್ಲಾ ವಿಷಯಗಳಲ್ಲಿ ಫಲಿತಾಂಶ ಉತ್ತಮ ಪಡಿಸಿಕೊಳ್ಳಬಹುದಾಗಿದೆ. ತೇರ್ಗಡೆಯಾದ ವಿದ್ಯಾರ್ಥಿಗಳು ಮರು

ಪ್ರಯತ್ನದಲ್ಲಿ ಮೊದಲನೆ ಪ್ರಯತ್ನದಲ್ಲಿನ ಅಂಕಗಳಿಗಿಂತ ಕಡಿಮೆ ಅಂಕಗಳಿಸಿದಲ್ಲಿ ಮೊದಲನೆ ಪ್ರಯತ್ನದಲ್ಲಿ ಗಳಿಸಿರುವ ಅಂಕಗಳನ್ನು ಉಳಿಸಿಕೊಳ್ಳಬಹುದಾಗಿದೆ.

**ಅನುಸರಿಸಬೇಕಾದ ಕ್ರಮಗಳು:**

- ಬಿಳಿ ಹಾಳೆಯಲ್ಲಿ ಅರ್ಜಿ ಬರೆದು ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ದೃಢೀಕರಿಸಿ, ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ರವರ ಮುಖಾಂತರ ಮಂಡಳಿಗೆ ನಿಗದಿತ ಶುಲ್ಕದೊಂದಿಗೆ ಮತ್ತು ಮೂಲ ಅಂಕಪಟ್ಟಿಯೊಂದಿಗೆ ಅರ್ಜಿ ಸಲ್ಲಿಸಬೇಕು.
- ಮಂಡಳಿಯಿಂದ ಅನುಮತಿ ಪಡೆದನಂತರ ಪರೀಕ್ಷಾ ಶುಲ್ಕ ಪಾವತಿಸಬೇಕು.
- ಹಿಂದೆ ವ್ಯಾಸಂಗ ಮಾಡಿದ ಕಲಿಕಾ ಕೇಂದ್ರಗಳಿಂದಲೇ ಪರೀಕ್ಷಾ ಶುಲ್ಕ ಪಾವತಿಸಬೇಕು ಈ ಕಲಿಕಾ ಕೇಂದ್ರಕ್ಕೆ ನಿಗದಿಪಡಿಸಿದ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಪರೀಕ್ಷಾ ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ.
- ತಾನು ಯಾವುದೇ ಉನ್ನತ ವ್ಯಾಸಂಗವನ್ನು ಮುಂದುವರೆಸಿಲ್ಲ ಅಥವಾ ಉದ್ಯೋಗಕ್ಕೆ ಸೇರಿರುವುದಿಲ್ಲ ಎಂಬ ಬಗ್ಗೆ ಮುಚ್ಚಳಿಕೆ ಪತ್ರ ಸಲ್ಲಿಸುವುದು.
- ಪ್ರಯತ್ನ ಪರೀಕ್ಷೆಯಲ್ಲಿ ಫಲಿತಾಂಶ ಉತ್ತಮವಾಗದಿದ್ದ ಪಕ್ಷದಲ್ಲಿ ಹಿಂದಿನ ಫಲಿತಾಂಶವನ್ನೇ ಉಳಿಸಿಕೊಳ್ಳಬಹುದು.
- ಅನುಮತಿ ಪತ್ರದೊಂದಿಗೆ ಪರೀಕ್ಷಾ ಶುಲ್ಕವನ್ನು ನಿಗದಿತ ಅವಧಿಯೊಳಗೆ ಮಂಡಳಿಗೆ ಸಲ್ಲಿಸುವುದು.

➢ **ಫಲಿತಾಂಶ ಪ್ರಕಟಣೆಯಾದ ನಂತರ ಛಾಯಾ ಪ್ರತಿ, ಮರು ಎಣಿಕೆ ಮತ್ತು ಮರು ಮೌಲ್ಯಮಾಪನಕ್ಕೆ ಮಂಡಳಿ ಅವಕಾಶ ಕಲ್ಪಿಸಿದೆ.**

➢ **ಅಂಕಪಟ್ಟಿ ವಿತರಣೆ:**–ಕರ್ನಾಟಕ ಮುಕ್ತ ಶಾಲೆ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಮುಖಾಂತರ ವಿತರಿಸಲಾಗುವುದು. ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಎಂ.ಎಸ್.ಎ(Marks Statement Cum-Application) ಕಳುಹಿಸಲಾಗುವುದು. ಮುಂದೆ ವಿದ್ಯಾರ್ಥಿಯು ಪರೀಕ್ಷೆ ತೆಗೆದುಕೊಂಡಾಗ ಎಂ.ಎಸ್.ಎಯಲ್ಲಿ ಭರ್ತಿ ಮಾಡಿ ಪರೀಕ್ಷಾ ಅರ್ಜಿ ಸಲ್ಲಿಸಬೇಕಾಗುತ್ತದೆ.

*******************